ವಿಷಯ:- ರಾಜ್ಯದಲ್ಲಿ ಈ ವರ್ಷ ಹೆಚ್ಚುವರಿ ಮಳೆಯಿಂದಾಗಿ ಆದ ಹಾನಿಗೆ ಪರಿಹಾರ ಕೊಡುವ ಬಗ್ಗೆ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ನೆರವು ಕೋರಿರುವ ಬಗ್ಗೆ.

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ ೫೩:- (೪೫೯)
ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ)
ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೮) ರಾಜ್ಯದಲ್ಲಿ ಈ ವರ್ಷ ಹೆಚ್ಚುವರಿ ಮಳೆಯಿಂದ ಆದ ಹಾನಿಗೆ ಪರಿಹಾರ ಕೊಡಲು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಮನವಿ ಮಾಡಿದೆಯೇ?
೯) ಈ ಮನವಿಗೆ ಕೇಂದ್ರ ಸರ್ಕಾರದಿಂದ ಪುರಸ್ಕಾರ ಸಿಕ್ಕಿದೆಯೇ?
೧೦) ಕೇಂದ್ರ ಸರ್ಕಾರವು ಎಶ್ವ ಬ್ಯಾಂಕ್‌ನ ಮೂಲಕ ನೆರವು ಕೊಡಲು ರಾಜ್ಯ ಸರ್ಕಾರಕ್ಕೆ ಭರವಸೆ ಕೊಟ್ಟಿದೆಯೇ?

ಶ್ರೀ ಎಂ. ರಾಜಶೇಖರ ಮೂರ್ತಿ
(ಕಂದಾಯ ಸಚಿವರು)

ಹೌದು
ಹೌದು
ಹೌದು

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ಈ ವರ್ಷ ರಾಜ್ಯದಲ್ಲಿ ಹೆಚ್ಚುವರಿ ಮಳೆಯಿಂದ ಆಗಿರತಕ್ಕಂಥ ಹಾನಿಯ ಪರಿಹಾರಕ್ಕೆ ಕೇಂದ್ರ ಸರಕಾರದವರಿಂದ ಎಷ್ಟು ನೆರವನ್ನು ಕೇಳಿದ್ದಾರೆ ಎಂಬ ಬಗ್ಗೆ ನಾನು ಕೇಳಬಯಸುತ್ತೇನೆ. ಎರಡನೆಯದಾಗಿ ಎಷ್ಟು ಹಣವನ್ನು ಕೇಂದ್ರ ಸರಕಾರದವರು ಸಾಲದ ರೂಪದಲ್ಲಿ ಮತ್ತು ನೆರವಿನ ರೂಪದಲ್ಲಿ ಬಿಡುಗಡೆ ಮಾಡಿದ್ದಾರೆ? ಈ ವಿಚಾರದ ಬಗ್ಗೆ ವಿಶ್ವಬ್ಯಾಂಕ್‌ನ ಪ್ರತಿಕ್ರಿಯೆ ಏನು ಎಂಬುದನ್ನು ಕೇಳ ಬಯಸುತ್ತೇನೆ.

ಶ್ರೀ ಎಂ. ರಾಜಶೇಖರಮೂರ್ತಿ:- ಪರಿಹಾರ ಕಾರ್ಯಕ್ಕಾಗಿ ರಾಜ್ಯ ಸರಕಾರದವರು ಕೇಂದ್ರ ಸರಕಾರವನ್ನು ೨೦೦ ಕೋಟಿ ರೂಪಾಯಿಗಳನ್ನು ನೆರವಿನ ರೂಪದಲ್ಲಿ ಕೊಡಬೇಕೆಂದು ಕೇಳಿದ್ದೇವೆ. ಅದರ copy of the memorandum ನಿಮಗೆ ಕೊಟ್ಟಿದ್ದೇವೆ. ದಯವಿಟ್ಟು ತಾವುಗಳು ಅದನ್ನು ಓದಿಕೊಳ್ಳಬೇಕು. ಅವರಿಂದ ನಮಗೆ ಬಂದಿರತಕ್ಕಂಥ ಮೊಬಲಗು, ಚಾಲ್ತಿ ಸಾಲಿನಲ್ಲಿ ೨೦ ಕೋಟಿ, ೨೫ ಲಕ್ಷ ರೂಪಾಯಿಗಳು ಮತ್ತು, ೧೯೯೫-೯೪ ರಲ್ಲಿ ಎರಡು ಕಂತುಗಳನ್ನು ಮುಂಗಡವಾಗಿ ಕೊಟ್ಟಿದ್ದಾರೆ. ಅದು ೧೦ ಕೋಟಿ, ೧೨ ಲಕ್ಷ ರೂಪಾಯಿಗಳು. ಒಟ್ಟು ೩೦ ಕೋಟಿ, ೩೭ ಲಕ್ಷ ರೂಪಾಯಿಗಳು ಬಂದಿದೆ. ಇದು ಕೆಲಾಮಿಟೀಸ್ ರಿಲೀಫ್ ಫಂಡ್‌ಗೆ ಕ್ರೆಡಿಟ್ ಆಗುತ್ತದೆ. ಅದರ ಜೊತೆಗೆ, ೩೦ ಕೋಟಿ ರೂಪಾಯಿಗಳನ್ನು ವೇಸ್ ಅಂಡ್ ಮೀನ್ಸ್ ಅಡ್ವಾನ್ಸ್ ಎಂದು ಕೊಟ್ಟಿದ್ದಾರೆ. ಈ ಅಡ್ವಾನ್ಸ್‌ನ್ನು ಮಾರ್ಚ್ ೩೧ ರೊಳಗಾಗಿ ಅಡ್‌ಜಸ್ಟ್ ಮಾಡಿ ಎಂದು ಕೂಡ ಅವರು ಹೇಳಿದ್ದಾರೆ. ಇಷ್ಟು ಅವರಿಂದ ನಮಗೆ ಬಂದಿರತಕ್ಕಂಥ ಮೊಬಲಗು. ತಾವು ವಿಶ್ವಬ್ಯಾಂಕ್‌ಗೆ ಏನಾದರೂ ಪ್ರಾಜೆಕ್ಟ್ ಮಾಡಿದ್ದೀರಾ ಎಂದು ಕೇಳಿದ್ದೀರಿ. ಅದಕ್ಕಾಗಿ ನಾವು ಒಂದು ಸಮಿತಿಯನ್ನು ಮಾಡಿದ್ದು, ಅದರ ಪ್ರಾಜೆಕ್ಟ್ ರಿಪೋರ್ಟ್ ಸದ್ಯದಲ್ಲಿಯೇ ಅಂದರೆ ೧೦-೧೫ ದಿವಸಗಳಲ್ಲಿ ಫೈನಲೈಸ್ ಆಗುತ್ತದೆ. ಫೈನಲೈಸ್ ಆದಮೇಲೆ ಅದನ್ನು ಕೇಂದ್ರ ಸರಕಾರಕ್ಕೆ ಕೊಡುತ್ತೇವೆ, ಅವರು ವಿಶ್ವಬ್ಯಾಂಕ್‌ನವರಿಗೆ ಅದನ್ನು ಕಳುಹಿಸಿ ನಮಗೆ ಹಣವನ್ನು ಕೊಡಬೇಕೆಂದು ಒತ್ತಾಯ ಮಾಡಿ ಹೇಳುತ್ತಾರೆ. ನಂತರ ಅದು ಬರುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೇ, ಕೇಂದ್ರ ಸರಕಾರದವರು ವೇಸ್ ಅಂಡ್ ಮೀನ್ಸ್ ಮೂಲಕವಾಗಿ ೩೦ ಕೋಟಿ ರೂಪಾಯಿಗಳನ್ನು ನೀವು ಈ ವರ್ಷದೊಳಗೆ ಅಡ್‌ಜಸ್ಟ್ ಮಾಡಿಕೊಳ್ಳಿ ಎಂದು ಹೇಳಿದ್ದಾರೆಯೇ ಏನಃ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕಳೆದ ೪೦ ವರ್ಷಗಳಿಂದಲೂ ಹಾನಿಯಾಗಿರಲಿಲ್ಲ. ಆದರೆ ಕೇಂದ್ರದವರು ಕೇರಳ ಮತ್ತು ತಮಿಳುನಾಡುಗಳಿಗೆ ಹಣವನ್ನು ಕೊಟ್ಟು ನಮಗೆ ನೆರವನ್ನು ಏತಕ್ಕಾಗಿ ಕೊಟ್ಟಿಲ್ಲ? ಹಾಗಾದರೆ ನಮ್ಮ ಮುಖ್ಯಮಂತ್ರಿಯವರು ಏನು ಮಾಡುತ್ತಿದ್ದಾರೆ? ಯಾವುದೇ ಒಂದು ನೆರವನ್ನು ಏತಕ್ಕೆ ತೆಗೆದುಕೊಂಡಿಲ್ಲ? ಹೇಗೆ ಕೇಂದ್ರದವರ ಮಲತಾಯಿ ಧೋರಣೆ ಎರುದ್ದ, ತಾವುಗಳು ಪ್ರತಿಭಟನೆಯನ್ನು ಮಾಡಿದ್ದೀರಾ? ಮುಖ್ಯಮಂತ್ರಿಯವರು ಇದರ ಬಗ್ಗೆ ಪ್ರಧಾನಿಯವರ ಜೊತೆಯಲ್ಲಿ ಮಾತನಾಡಿದ್ದಾರೆಯೇ?

ಶ್ರೀ ಎಂ. ರಾಜಶೇಖರ ಮೂರ್ತಿ:- ಮಾನ್ಯ ಅಧ್ಯಕ್ಷರೇ, ಕೇಂದ್ರ ಸರಕಾರದವರು ಎಲ್ಲಾ ರಾಜ್ಯ ಸರಕಾರಗಳವರಿಗೂ ಒಂದೇ ರೀತಿಯ ನೆರವಿನ ಅಮೌಂಟ್‌ನ್ನು ಕೊಟ್ಟಿದ್ದಾರೆ. ಯಾವ ರಾಜ್ಯ ಸರಕಾರಗಳಿಗೂ ಅವರು ಗ್ರಾಂಟ್‌ನ್ನು ಕೊಟ್ಟಿಲ್ಲ. ಅವರು ಅಡ್ವಾನ್ಸ್ ಎಂದು ಕೊಟ್ಟಿದ್ದಾರೆ, ಅದು ಅಡ್‌ಜಸ್ಟ್ ಆಗಬೇಕೆಂದು ಹೇಳಿದ್ದಾರೆ. ಕೆಲಾಮಿಟೀಸ್ ರಿಲೀಫ್ ಫಂಡ್‌ಗೆ ಕ್ರೆಡಿಟ್ ಆಗತಕ್ಕಂಥಾದ್ದು, ಆ ಅಕೌಂಟ್‌ನಲ್ಲಿ ಕೊಟ್ಟಿದ್ದು ಮಾತ್ರ ಅಡ್‌ಜಸ್ಟ್ ಆಗುವುದಿಲ್ಲ. ಅವರೇನೂ ಮಲತಾಯಿ ಧೋರಣೆಯನ್ನು ತೋರಿಸಿಲ್ಲ. ಎಲ್ಲರನ್ನು ಒಂದೇ ರೀತಿಯಲ್ಲಿ ಕಾಣುತ್ತಾ ಇದ್ದಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ನೆರೆಹಾವಳಿಯ ಬಗ್ಗೆ ನಿನ್ನೆ ಚರ್ಚೆಯಾಗಿದೆ, ಮಾನ್ಯ ಸಚಿವರು ಸ್ಟೇಟ್‌ಮೆಂಟ್ ಮಾಡುತ್ತಾರೆ ಎಂದು ಕಾಣುತ್ತದೆ. ಇವೊತ್ತು ಮೂರು ತಿಂಗಳು ಕಳೆದರೂ ಕೂಡ ನೀವು ಆಶ್ವಾಸನೆ ಕೊಟ್ಟಹಾಗೆ ಹೆಕ್ಟೇರಿಗೆ ೫೦೦ ರೂಪಾಯಿಗಳನ್ನು ಕೂಡ ಕೊಟ್ಟಿಲ್ಲ.

ಶ್ರೀ ಬಸವರಾಜರಾಯರೆಡ್ಡಿ:- ಮಾನ್ಯ ಸಚಿವರು ಉತ್ತರದಲ್ಲಿ ಹೇಳಿರುವಹಾಗೆ ರಾಜ್ಯದಲ್ಲಿ ಒಟ್ಟು ೩.೧೩ ಲಕ್ಷ ಹೆಕ್ಟೇರ್ ಬೆಳೆ ನಾಶವಾಗಿದ್ದು ೧೪೦ ಕೋಟಿ ರೂಪಾಯಿಗಳ ನಷ್ಟವಾಗಿದೆ, ಅದರೂ ಕೂಡ ೩ ಕೋಟಿ ರೂಪಾಯಿಗಳನ್ನು ಪರಿಹಾರವಾಗಿ ರೈತರುಗಳಿಗೆ ಕೊಟ್ಟಿದ್ದಾರೆ. ಹೆಕ್ಟೇರ್‌ಗೆ ಅಂದರೆ ಎರಡೂವರೆ ಎಕರೆಗೆ ೫೦೦ ರೂಪಾಯಿಗಳನ್ನು ಕೊಡುತ್ತಾ ಇದ್ದಾರೆ. ಇದು ಯಾವುದಕ್ಕೆ ಸಾಕಾಗುತ್ತದೆ? ಹಾಗೆಯೇ ಅದೂ ಕೂಡ, ಕೆಲವೊಂದು ಜಿಲ್ಲೆಗಳಲ್ಲಿ ಸಮರ್ಪಕವಾಗಿ ಹಂಚಿಕೆಯಾಗಿಲ್ಲ. ನಿಮ್ಮ ಸರಕಾರವು ರೈತರ ಪರವಾಗಿ ಇರುವ ಸರಕಾರವಾಗಿದ್ದರೆ, ಕೊನೆಪಕ್ಷ ಎಕರೆಗೆ ಒಂದು ಸಾವಿರ ರೂಪಾಯಿಗಳನ್ನಾದರೂ ಕೊಡಬೇಕು. ನಮ್ಮ ರಾಯಚೂರು ಜಿಲ್ಲೆಯಲ್ಲಿ ಜನರ ಮನೆ, ಮಠ ಎಲ್ಲವೂ ನಾಶವಾಗಿ ಅವರ ಪರಿಸ್ಥಿತಿಯು ಏನಾಗಿದೆ ಎಂದು ತಾವೇ ನೋಡಿದ್ದೀರಿ. ಆದ್ದರಿಂದ ಇದನ್ನು ಎಕರೆಗೆ ಒಂದು ಸಾವಿರ ರೂಪಾಯಿಗಳಾಗಿಯಾದರೂ ಕೊಡುವಂತೆ ಮಾಡಬೇಕು ಮತ್ತು ಮುಂದಿನ ವರ್ಷ ರೈತರಿಗೆ ಗೊಬ್ಬರ ಮತ್ತು ಬೀಜಗಳನ್ನು ಉಚಿತವಾಗಿ ಕೊಡುವುದಕ್ಕೆ ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ಹೇಳಬೇಕು.

೧೧.೩೦ ಎ.ಎಂ.

ಲೋಕೋಪಯೋಗಿ ಇಲಾಖೆ ರಸ್ತೆ ಮತ್ತು ಜಿಲ್ಲಾ ಪರಿಷತ್ತಿನ ರಸ್ತೆಗಳಿಗೆ ಜಿಲ್ಲಾವಾರು ಎಷ್ಟು ಹಣ ಕೊಟ್ಟಿದ್ದೀರಿ ಎಂದು ನಾನು ಕೇಳಿದ್ದೇನೆ. ಉದಾಹರಣೆಗೆ ನನ್ನ ಜಿಲ್ಲೆ ರಾಯಚೂರು. ಈ ರಾಯಚೂರು ಜಿಲ್ಲೆಯ ಲೋಕೋಪಯೋಗಿ ರಸ್ತೆಗಳಿಗೆ ಕೇವಲ ೪೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದು ಯಾವುದಕ್ಕೆ ಆಗುತ್ತದೆ. ರಾಯಚೂರು ಜಿಲ್ಲೆ ರಾಜ್ಯದಲ್ಲಿಯೇ ಭೌಗೋಳಿಕವಾಗಿ ಮೂರನೇ ದೊಡ್ಡ ಜಿಲ್ಲೆ. ಒಂದು ಜಿಲ್ಲಾ ಕೇಂದ್ರದಿಂದ ನನ್ನ ಯಲಬುರ್ಗ

೨೦೦ ಕಿ.ಮಿ. ಆಗುತ್ತದೆ. ರಾಯಚೂರು-ಗಂಗಾವತಿಯ ೧೫೦ ಕಿ.ಮಿ. ರಸ್ತೆಕೆಟ್ಟು ಹೋಗಿದೆ. ನೀವೇ ಅಲ್ಲಿ ಭೇಟಿಯಾಗಿ ನೋಡಿದ್ದೀರಿ. ಅದರ ಜೊತೆಗೆ ಎರಡು ದೊಡ್ಡ ಹಳ್ಳಗಳು ಇವೆ. ಸಿಂಧನೂರು ತಾಲ್ಲೂಕಿನಲ್ಲಿರುವ ಒಂದು ದೊಡ್ಡ ಹಳ್ಳ ಮತ್ತು ಪೋತ್ನಾಳದಲ್ಲಿರುವ ಕಿತ್ತುಹೋಗಿದೆ. ಅದನ್ನು ರಿಪೇರಿ ಮಾಡಲಿಕ್ಕೆ ಒಂದೊಂದಕ್ಕೆ ೫೦ ಲಕ್ಷ ಬೇಕು. ಈ ೪೫ ಲಕ್ಷದಿಂದ ಏನೂ ಆಗುವುದಿಲ್ಲ. ಕೊನೇಪಕ್ಷ ೫ ಕೋಟಿ ರೂಪಾಯಿಗಳನ್ನು ಲೋಕೋಪಯೋಗಿ ಇಲಾಖೆಗೆ ರಸ್ತೆ ರಿಪೇರಿಗಾಗಿ ಕೊಡಬೇಕಾಗುತ್ತದೆ. ಮತ್ತು ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಬರುವ ಗ್ರಾಮೀಣ ರಸ್ತೆಗಳಿಗೆ ಒಂದು ಪೈಸೆ ಕೂಡ ಇದುವರೆಗೂ ಕೊಟ್ಟಿಲ್ಲ. ನಮ್ಮ ರಾಯಚೂರು ಜಿಲ್ಲೆಯಲ್ಲಿ ಸುಮಾರು ೧೫ ಸಾವಿರ ಕಿ.ಮಿ.ರಸ್ತೆ ಅಂದರೆ ಪ್ರತಿ ತಾಲೂಕಿನಲ್ಲಿ ಒಂದೊಂದು ಸಾವಿರ ಕಿ.ಮಿ. ರಸ್ತೆ, ಸೇತುವೆಗಳು ಕಿತ್ತುಹೋಗಿವೆ, ಇದರ ವರದಿ ನಿಮಗೆ ಕೊಟ್ಟಿದ್ದೇವೆ. ನೀವು ಇದುವರೆಗೂ ಒಂದು ಪೈಸೆ ಕೊಟ್ಟಿಲ್ಲ. ಇದು ನಿಮಗೆ ಗ್ರಾಮೀಣ ಪ್ರದೇಶದಲ್ಲಿ ರಸ್ತೆಗಳು ಸುಧಾರಣೆ ಆಗುವುದು ಬೇಕಿಲ್ಲ ಎಂದು ತಿಳಿಸುತ್ತದೆ. ಜಾನುವಾರುಗಳ ನಷ್ಟದ ಬಗ್ಗೆ ಇವರು ಜಿಲ್ಲಾವಾರು ಹಣ ನೀಡುವಲ್ಲಿ ಬಹಳ ತಾರತಮ್ಯ ಮಾಡಿದ್ದಾರೆ. ಉದಾಹರಣೆಗೆ ರಾಯಚೂರು ಜಿಲ್ಲೆಯಲ್ಲಿ ೧೭,೯೯೧ ಜಾನುವಾರು ಸತ್ತಿವೆ. ಹಾನಿ ೧ ಕೋಟಿ ೨೭ ಲಕ್ಷ ೪೪ ಸಾವಿರ ಆದರೆ, ೧೭ ಲಕ್ಷ ಕೊಟ್ಟಿದ್ದೀರಿ. ಆದರೆ ಮೈಸೂರಿನಲ್ಲಿ ೧,೪೧೪ ಜಾನುವಾರು ಸತ್ತಿವೆ, ನಷ್ಟ ಕೇವಲ ೬ ಲಕ್ಷ ಆದರೆ ಪರಿಹಾರ ೨ ಲಕ್ಷ ಕೊಟ್ಟಿದ್ದೀರಿ, ಒನ್‌ಥರ್ಡ್ ಕೊಟ್ಟಿದ್ದೀರಿ. ನಮ್ಮ ಜಿಲ್ಲೆಗೆ ಕೊಟ್ಟಿಲ್ಲ, ಅದೇ ರೀತಿ ಬಳ್ಳಾರಿಗೆ ಜಾಸ್ತಿ ಕೊಟ್ಟಿದ್ದೀರಿ, ಬೆಳಗಾಂ, ಬಿಜಾಪುರ, ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಜಾನುವಾರು ನಷ್ಟಕ್ಕೆ ನೀವು ಹಣ ಕೊಟ್ಟಿಲ್ಲ. ನೀವು ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಪರಿಹಾರ ನೀಡುವಲ್ಲಿ ಮಲತಾಯಿಧೋರಣೆ ತೋರಿಸುತ್ತಿದ್ದೀರಿ ಮತ್ತು ಅಲ್ಲಿನ ರೈತರಿಗೆ ಗ್ರಾಮೀಣ ಪ್ರದೇಶಕ್ಕೆ ಮಲತಾಯಿಧೋರಣೆ ತೋರಿಸುತ್ತಿದ್ದೀರಿ. ಅದರ ಬಗ್ಗೆ ನೀವು ಏಕೆ ಹಣ ಕೊಟ್ಟಿಲ್ಲ ಎಂದು ತಿಳಿಸಬೇಕು.

ಶ್ರೀ. ಬಸವರಾಜರಾಯರೆಡ್ಡಿ:- ಉತ್ತರ ಕರ್ನಾಟಕ ಜಿಲ್ಲೆಗಳಿಗೆ ಸರ್ಕಾರ ಮಲತಾಯಿಧೋರಣೆ ತೋರಿಸುತ್ತಾ ಇದೆ.

(ಗೊಂದಲ)

ಶ್ರೀ ಎಂ. ರಾಜಶೇಖರಮೂರ್ತಿ:- ಉತ್ತರ ಕನಾಟಕದ ಜಿಲ್ಲೆಗಳಿಗೆ ಸಾಕಷ್ಟು ಹಣ ಕೊಡದೆ ಮಲತಾಯಿಧೋರಣೆ ತೋರಲಾಗುತ್ತಿದೆ ಎಂದು ಹೇಳುತ್ತಾರೆ. ಇದು ಸತ್ಯಾಂಶಕ್ಕೆ ದೂರವಾದದ್ದು. ಉತ್ತರ ಕರ್ನಾಟಕದ ರಾಯಚೂರು ಜಿಲ್ಲೆ ಏನಿದೆ ಅದಕ್ಕೆ ಸುಮಾರು ೧೩ ಕೋಟಿಗಿಂತ ಜಾಸ್ತಿ ಕೊಟ್ಟಿದ್ದೇವೆ ಖರ್ಚಾಗಿರುವುದರಲ್ಲಿ. ಹಾಗೆಯೇ ಬಳ್ಳಾರಿ ಜಿಲ್ಲೆಗೆ ೧೦ ಕೋಟಿ ಕೊಟ್ಟಿದ್ದೇವೆ, ಧಾರವಾಡ ಜಿಲ್ಲೆಗೆ ಬೆಳಗಾಂ ಜಿಲ್ಲೆಗೆ ಕೊಟ್ಟಿದ್ದೇವೆ.

ಶ್ರೀ ಬಸವರಾಜರಾಯರೆಡ್ಡಿ:- ಜಿಲ್ಲಾಪರಿಷತ್ ರಸ್ತೆಗಳಿಗೆ ನೀವು ಒಂದು ಪೈಸೆ ಕೊಟ್ಟಿಲ್ಲ, ಗ್ರಾಮೀಣ ಪ್ರದೇಶಗಳಿಗೆ ಕೊಟ್ಟಿರುವುದರ ಬಗ್ಗೆ ದಯವಿಟ್ಟು ತೋರಿಸಿ. ನಾವು ಮನವಿ ಕೊಟ್ಟಿದ್ದೇವೆ, ನಮ್ಮ ರಸ್ತೆಗಳು ಹಾಳಾಗಿ ಹೋಗಿವೆ.

ಶ್ರೀ ಎಂ. ರಾಜಶೇಖರಮೂರ್ತಿ :- ಅವರಿಗೆ ಉತ್ತರ ಬೇಕೋ ಅಥವಾ ಅವರೇ ಮಾತನಾಡಬೇಕೇ ನನಗೆ ಇದು ಗೋತ್ತಾಗುವುದಿಲ್ಲ.

ಅಧ್ಯಕ್ಷರು:- ತಾವು ಉತ್ತರ ಕೊಡಬೇಕು ಅವರು ಏನೂ ಕೇಳಿದರೂ:- It will not be recorded. I am going to tell.

ಶ್ರೀ ಎಂ. ರಾಜಶೇಖರಮೂರ್ತಿ:- ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಎಲ್ಲಾ ಒಂದೇ ಸಲ ಬಿಡುಗಡೆ ಮಾಡುವುದು ಸಾಧ್ಯವಾಗುವುದಿಲ್ಲ. ಯಾವಾಗ ಸರ್ಕಾರಕ್ಕೆ ಹಣ

ಬರುತ್ತದೆ, ಸ್ವಲ್ಪ ಸ್ವಲ್ಪ ಹಂತ ಹಂತವಾಗಿ ಪ್ರೈಯಾರಿಟಿ ಬೇಸಿಸ್‌ನಲ್ಲಿ ಬಿಡುಗಡೆ ಮಾಡಿಕೊಂಡು ಹೋಗುತ್ತೇವೆ. ಅದುವರೆಗೂ ಸ್ವಲ್ಪ ಸಮಾಧಾನದಿಂದ ಇರಬೇಕಾಗುತ್ತದೆ.

(ಗೊಂದಲ)

ಶ್ರೀ ಬಸವರಾಜರಾಯರೆಡ್ಡಿ:- ತಾವು ನಮ್ಮ ಜಿಲ್ಲೆಗೆ ಬಂದಿದ್ದೀರಿ. ಒಂದು ರಸ್ತೆ ಕೂಡ ಸರಿಯಾಗಿಲ್ಲ. ಬಸ್ ಸಂಪರ್ಕ ನಿಂತುಹೋಗಿದೆ. ಹಳ್ಳಿಗಾಡಿನ ಪರಿಸ್ಥಿತಿ ಏನಾಗಬೇಕು?

ಶ್ರೀ ಪಿ.ಸಿ. ಸಿದ್ದನಗೌಡರ್:- ಸತ್ಯಕ್ಕೆ ಬಹಳ ದೂರವಾಗಿದೆ ಎಂದು ಮಾನ್ಯ ಸಚಿವರು ಹೇಳಿದರು. ಸತ್ಯಕ್ಕೆ ಸಮೀಪವಾಗಿ ನಾನು ಹೇಳುತ್ತೇನೆ. ಕಳೆದ ಅಸೆಂಬ್ಲಿಯಲ್ಲಿ ಧಾರವಾಡ ಜಿಲ್ಲೆಯಲ್ಲಿ ಕ್ರಾಪ್ ಲಾಸ್ ಏನಾಗಿದೆ, ಅದಕ್ಕೆ ಪರಿಹಾರ ಕೊಡುತ್ತೇನೆ ಎಂದು ಹೇಳಿದರು. ಜಿಲ್ಲಾಧಿಕಾರಿಗಳು ಕೇಳಿದರೆ ಕೊಡುತ್ತೇನೆ ಎಂದು ಹೇಳಿದರು. ಜಿಲ್ಲಾಧಿಕಾರಿಗಳು ಅನೇಕ ಸಲ ಕೇಳಿದ್ದಾರೆ. ಧಾರವಾಡ ಜಿಲ್ಲೆಗೆ ಒಂದು ಪೈಸೆಯನ್ನು ಕೊಟ್ಟಿಲ್ಲ. ಬೆಳೆ ಹಾನಿಯಾಗಿದೆ ಸತ್ಯಕ್ಕೆ ಬಹಳ ಸಮೀಪ ಇದೆ ಎಂದು ಇವರು ಹೇಳುತ್ತಿದ್ದಾರೆ. ಬಹಳ ದೂರ ಇದೆ ಎಂದು ಮಾನ್ಯ ಸಚಿವರಿಗೆ ನಾನು ಹೇಳುತ್ತಿದ್ದೇನೆ. ಈ ತಾರತಮ್ಯ ಬೇಡ ಈ ತಾರತಮ್ಯಕ್ಕೋಸ್ಕರ ನಾನು ಸಭಾತ್ಯಾಗ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಬಸವರಾಜರಾಯರೆಡ್ಡಿ:- ರಾಯಚೂರು ಮತ್ತು ಉತ್ತರ ಕರ್ನಾಟಕಕ್ಕೆ ಈ ರೀತಿ ಮಲತಾಯಿಧೋರಣೆ ಮಾಡಿದರೆ ನಾವು ಪ್ರತಿಭಟನೆ ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈ ಪ್ರಶ್ನೆಗೆ ಉತ್ತರ ಕೊಡುವಾಗ ಕೆಲವು ಫ್ಯಾಕ್ಟ್ಸ್ ತಮ್ಮ ಮುಂದಿಟ್ಟಿದ್ದಾರೆ. ನಾನು ತಿಳಿದುಕೊಂಡಿದ್ದೇನೆ. ಅವರು ಒಂದು ಮಾತು ಒಪ್ಪಿಕೊಳ್ಳುತ್ತಾರೆ. ಅದೇನೆಂದರೆ, ಇಂಥ ಒಂದು ಅನಾಹುತ ಇಂಥ ಮಳೆಯಿಂದ ರೈತರಿಗೆ, ಸಾಮಾನ್ಯ ಜನರಿಗೆ, ದನಕರುಗಳಿಗೆ ಏನು ಕಷ್ಟವಾಯಿತು, ಏನು ಜನರು ಸತ್ತರು, ದನಕರುಗಳು ಸತ್ತವು, ಇದು ಈ ರಾಜ್ಯದ ಇತಿಹಾಸದಲ್ಲಿ ಯಾವಾಗಲೂ ಆಗಿರಲಿಲ್ಲ. ಅದನ್ನು ಒಪ್ಪಿಕೊಳ್ಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಇವತ್ತಿನತನಕ ಸನ್ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಕೇಂದ್ರ ಸರ್ಕಾರ ಮಲತಾಯಿಧೋರಣೆಯನ್ನು ತೋರಿಸುತ್ತಿದೆ, ಅನ್ಯಾಯವನ್ನು ಮಾಡುತ್ತಿದೆ ಎಂದು ಹೇಳಬೇಕಾಗುತ್ತದೆ. ಏಕೆಂದರೆ, ಅನ್‌ಪ್ರೆಸಿಡೆಂಟೆಡ್ ಇದ್ದಾಗ ನೀವು ಮೂರು ನೂರು ಕೋಟಿ ರೂಪಾಯಿ ಕೇಳಿದಾಗ ಅಟ್‌ಲೀಸ್ಟ್ ೧೦೦ ಕೋಟಿಯಾದರೂ ಕೊಡಬೇಕಾಗಿತ್ತು. ಈ ಹಿಂದೆ ಕೇಂದ್ರ ಸರ್ಕಾರಗಳು ಕೊಟ್ಟಿದ್ದಾವೆ. ಈ ಸರ್ಕಾರವೂ ಕೊಟ್ಟಿದೆ, ಬೇರೆ ಸರ್ಕಾರದವರೂ ಕೊಟ್ಟಿದ್ದಾರೆ. ಆದರೆ ಕೇಂದ್ರ ಸರ್ಕಾರದ ಪ್ರತಿನಿಧಿಗಳೇ ಬಂದಿಲ್ಲ. ತಮಿಳುನಾಡಿಗೆ, ಆಂಧ್ರ ಪ್ರದೇಶಕ್ಕೆ ಹೋದರು. ನಮ್ಮ ರಾಜ್ಯಕ್ಕೆ ಏತಕ್ಕೆ ಬಂದಿಲ್ಲ ಎಂದು ನನಗೆ ಗೊತ್ತಿಲ್ಲ. ಅದು ತಮಗೆ ಗೊತ್ತು. ಎರಡನೆಯದು, ನಮ್ಮ ಸದಸ್ಯರು ಹೇಳಿದ ಹಾಗೆ, ಇವತ್ತಿನತನಕ ಕ್ರಾಪ್ ಪರಿಹಾರವನ್ನು ರಾಜ್ಯದಲ್ಲಿ ಕೊಟ್ಟಿಲ್ಲ, ಪಂಪ್‌ಸೆಟ್‌ಗೆ ಹಣ ಕೊಟ್ಟಿಲ್ಲ. ಇನ್ನೂತನಕ ಒಂದು ಮನೆ ಕಟ್ಟಿ ಆಗಿಲ್ಲ. ನೀವು ೫೩ ಕೋಟಿ ರಿಲೀಸ್ ಮಾಡಿದ್ದೇವೆ ಎಂದು ಒಂದು ಕಡೆ ಹೇಳಿದ್ದೀರಿ. ಆ ಹಣ ಇನ್ನು ರೈತರಿಗೆ ಮುಟ್ಟಿಲ್ಲ. ಸಾಕಷ್ಟು ಭ್ರಷ್ಟಾಚಾರ ನಡೆದಿದೆ. ಈ ಕೆಲಸವನ್ನು ಸರ್ಕಾರ ವಾರ್‌ಫುಟಿಂಗ್‌ನಲ್ಲಿ ಮಾಡಬೇಕಾಗಿತ್ತು. ಸಂಪೂರ್ಣವಾಗಿ ಈ ಸರ್ಕಾರ ಈ ಜನರಿಗೆ ನೆರವು ಕೊಡುವುದಕ್ಕೆ ಸಹಾಯ ಮಾಡುವುದಕ್ಕೆ ವಿಫಲವಾಗಿದೆ, ಇದರ ಸಲುವಾಗಿ ನಾವು ಸಭಾತ್ಯಾಗ ಮಾಡತ್ತಿದ್ದೇವೆ.

(ಈ ಹಂತದಲ್ಲಿ ಜನತಾ ದಳದ ಸದಸ್ಯರುಗಳು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಅಧ್ಯಕ್ಷರೇ, ನೆರೆ ಹಾವಳಿ ಸಿಕ್ಕಿದ್ದನ್ನು ನೀವೇ ಒಪ್ಪಿಕೊಂಡಿದ್ದೀರಿ. ೩ ಲಕ್ಷದ ೩೩ ಸಾವಿರ ಎಕರೆ ಹೆಚ್ಚಿಗೆ ನಾಶವಾಗಿದೆ ಎಂದು ಹೇಳುತ್ತೀರಿ. ನೀವು ೫೦೦ ರೂಪಾಯಿ ಕೊಟ್ಟರೂ ಕೂಡ ೧೫ ಕೋಟಿ ರೂಪಾಯಿ ಪರಿಹಾರವನ್ನು ಕೊಡುವುದಕ್ಕೆ ಬೇಕು. ಆದ್ದರಿಂದ ದಯಮಾಡಿ...

Mr.Speaker:- I am calling the Hon'ble Revnue Minister. Kindly answer the next question...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಇದನ್ನು ಪ್ರತಿಭಟನೆ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ. ನೀವು ಹೇಳಿದ್ದನ್ನು ನಾವು ಕೇಳಿಕೊಂಡು ಹೋಗುವುದಕ್ಕೆ ಬಂದಿದ್ದೇವೆಯೇ? (ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು.)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದವರು ಕರ್ನಾಟಕವನ್ನು ಕಡೆಗಾಣಿಸಿದ್ದಾರೆ, ಮಲತಾಯಿಧೋರಣೆಯನ್ನು ಮಾಡಿದ್ದಾರೆ. ಕೇಂದ್ರ ಸರ್ಕಾರದ ನೀತಿಯ ವಿರುದ್ಧ ನಾವು ಸಭಾತ್ಯಾಗ ಮಾಡುತ್ತಿದ್ದೇವೆ. ಇದರಲ್ಲಿ ಯಾರ ವೈಯಕ್ತಿಕವಾದ ಪ್ರಶ್ನೆ ಇಲ್ಲ. ಏನಿದು ಅನ್ಯಾಯ? ಕೇಂದ್ರ ಸರ್ಕಾರದ ನೀತಿ ಸರಿಯಿಲ್ಲ. ಅನಾಹುತವಾದುದನ್ನು ನೋಡುವುದಕ್ಕೆ ಪ್ರಧಾನ ಮಂತ್ರಿಗಳು ಬರಲಿಲ್ಲ. ಪ್ರಧಾನ ಮಂತ್ರಿಗಳು ಕೇರಳಕ್ಕೆ ಬಂದರು, ಕರ್ನಾಟಕಕ್ಕೆ ಬರಲಿಲ್ಲ. ಕರ್ನಾಟಕವನ್ನು ಕಡೆಗಾಣಿಸಿದ್ದಾರೆ. ಕರ್ನಾಟಕ ಸರ್ಕಾರ ಕೇಂದ್ರ ಸರ್ಕಾರವನ್ನು ಒಪ್ಪಿಸುವುದರಲ್ಲಿ ಸಂಪೂರ್ಣ ವಿಫಲವಾಗಿದೆ. ಆದ್ದರಿಂದ ಕೇಂದ್ರದ ನೀತಿಯನ್ನು ನಾವು ವಿರೋಧಿಸುತ್ತೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ:- ನಿಮಗೆ ರೈತರ ಬಗ್ಗೆ ಸ್ವಲ್ಪವೂ ಆಸಕ್ತಿ ಇಲ್ಲ. ನಿಮಗೆ ಮಂತ್ರಿಯಾಗಬೇಕು, ಮುಖ್ಯಮಂತ್ರಿಗಳಾಗಬೇಕು ಎಂದು ಇದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ನೀವು ಬಡಿದಾಡಿಕೊಂಡು ಕೈಕಟ್ಟಿಕೊಂಡು ಕುಳಿತಿದ್ದೀರಿ, ರೈತರ ಬಗ್ಗೆ ಒಬ್ಬರೂ ಮಾತನಾಡುವುದಕ್ಕೆ ಸಿದ್ಧವಿಲ್ಲ. ಪರಿಹಾರವನ್ನು ಕೊಡುವುದಕ್ಕೂ ಸಿದ್ಧವಿಲ್ಲ. ನಿಮ್ಮಂಥ ಬೇಜಾವಾದ್ದಾರಿ, ರೈತ ವಿರೋಧಿ ಸರ್ಕಾರ ನೋಡಿ ಅವರೂ ಸಾಯುತ್ತಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಕೇಂದ್ರ ಸರ್ಕಾರದ ಮಲತಾಯಿಧೋರಣೆಗೆ ಧಿಕ್ಕಾರ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್, ಮಾನ್ಯ ಬಿ.ಎಸ್. ಯಡಿಯೂರಪ್ಪನವರು ಮತ್ತು ಮಾನ್ಯ ಕೆ.ಎಸ್. ಈಶ್ವರಪ್ಪನವರು ಸಭಾತ್ಯಾಗವನ್ನು ಮಾಡಿದರು)

ಶ್ರೀ ಎಸ್.ಹೆಚ್. ಕೌಜಲಗಿ:- ನನ್ನದೊಂದು ಪ್ರಶ್ನೆ ಇತ್ತು.

ಅಧ್ಯಕ್ಷರು:- ನಾನು ನಿಮ್ಮ ಪ್ರಶ್ನೆಯನ್ನು ಕೇಳಿದಾಗ ನೀವು ಹೊರಗಡೆ ಹೋಗಿದ್ದೀರಿ. ತಾವು ವಾಕ್‌ಔಟ್ ಮಾಡಿ ಹೊರಗೆ ಹೋಗಿದ್ದಿರಿ. ನಾನು ಮುಂದಿನ ಪ್ರಶ್ನೆಗೆ ಹೋಗಿದ್ದೇನೆ.

ಶ್ರೀಮಂಜುನಾಥ್ ಸಿ. ಕುನ್ನೂರ್:- ಮಾನ್ಯ ಅಧ್ಯಕ್ಷರೆ, ೫೮೦ನೇ ಪ್ರಶ್ನೆ ..... ಕುಡಿಯುವ ನೀರಿನ ಬಗ್ಗೆ ಬೋರ್‌ವೆಲ್ ಹಾಕುವುದಿದ್ದು ಇದು ಕಂದಾಯ ಮಂತ್ರಿಯವರಿಗೆ ಬರುವುದಿಲ್ಲ, ಇದು ಆರ್.ಡಿ.ಪಿ.ಆರ್. ಮಂತ್ರಿಯವರಿಗೆ ಬರುತ್ತದೆ.

ಶ್ರೀ ಎಂ.ವೈ. ಘೋರ್ಪಡೆ:- ಮಾನ್ಯ ಕಂದಾಯ ಮಂತ್ರಿಗಳಿಗೆ ಕೇಳಿರತಕ್ಕಂಥ ಪ್ರಶ್ನೆಯನ್ನು ವರ್ಗಾವಣೆ ಮಾಡಿದ್ದಾರೆಂದು ಈಗ ನನಗೆ ಗೊತ್ತಾಗಿದೆ. ಇದರಲ್ಲಿ ಕೇಳಿರತಕ್ಕಂಥ ಮಾಹಿತಿಯನ್ನು ನಾವು ಸಂಗ್ರಹಿಸಬೇಕಾದರೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ.

ಅಧ್ಯಕ್ಷರು:- ಈ ಪ್ರಶ್ನೆಯನ್ನು ತಡೆಹಿಡಿಯಲಾಗಿದೆ.

ವಿಷಯ:- ತೋಟಗಾರಿಕಾ ಉತ್ಪಾನ್ನಗಳ ಸಹಕಾರ ಸಂಘ

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ ೫೮:- (೬೩೬)
ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ)
ಮಾನ್ಯ ತೋಟಗಾರಿಕಾ ರಾಜ್ಯ ಸಚಿವರು ಈ ಕೆಳಕೆಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೋಟಗಾರಿಕೆ ಉತ್ಪಾದನೆಗಳ ಬೆಳೆಗಾರರ ಸಹಕಾರ ಸಂಘ ಲಾಭದಲ್ಲಿ ನಡೆಯುತ್ತಿದೆಯೇ (ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳ ಲಾಭ ಅಥವಾ ನಷ್ಟ ವಿವರ ನೀಡುವುದು)

ಆ) ಈ ಮೇಲ್ಕಂಡ ಸಂಘದಲ್ಲಿ ಹಣ ದುರು ಉಪಯೋಗವಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ.

ಇ) ಹಾಗಿದ್ದಲ್ಲಿ ಸರಕಾರ ಆ ಬಗ್ಗೆ ತಪ್ಪಿತಸ್ಥರ ವಿರುದ್ಧ ಕೈಗೊಂಡ ಕ್ರಮಗಳೇನು? (ತಪ್ಪಿತಸ್ಥರ ಪೂರ್ಣ ವಿವರಗಳನ್ನು ನೀಡುವುದು).

ಶ್ರೀ.ವಿ. ಕೃಷ್ಣಪ್ಪ
(ತೋಟಗಾರಿಕೆ ಸಚಿವರು)

ಹೌದು. ತೋಟದ ಬೆಳಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘವು ಕಳೆದ ಎರಡು ವರ್ಷಗಳಿಂದ ಲಾಭದಲ್ಲಿ ನಡೆಯುತ್ತಿದ್ದು ೧೯೯೧-೯೨ನೇ ವರ್ಷ ನಷ್ಟವನ್ನು ಅನುಭವಿಸಿದೆ. ಮೂರು ವರ್ಷದ ಲಾಭನಷ್ಟದ ವಿವರಗಳನ್ನು ಈ ಕೆಳಗೆ ನಮೂದಿಸಲಾಗಿದೆ (ಮೊತ್ತ ರೂ.ಗಳಲ್ಲಿ)

	ಲಾಭ	ನಷ್ಟ	
೧೯೮೯-೯೦	೯,೪೫,೧೫೬.೯೩	-	
೧೯೯೦-೯೧	೮,೭೬,೯೯೬.೬೩	-	
೧೯೯೧-೯೨	-	೨೯.೭೮	ಲಕ್ಷಗಳು.

ಹೌದು

ಸಂಘದಲ್ಲಿ ನಡೆದಿರುವ ಹಣ ದುರುಪಯೋಗಕ್ಕೆ ನೌಕರರಾದ ಶ್ರೀ ಕೆ.ವಿ. ವೆಂಕಟೇಶ ರೆಡ್ಡಿ ನಗದು ಗುಮಾಸ್ತರು ಮತ್ತು ಶ್ರೀ ಹೆಚ್.ಜಿ. ನಾರಾಯಣಸ್ವಾಮಿ (ಉಗ್ರಾಣ ಸಹಾಯಕ) ಇವರು ಕಾರಣರಾಗಿರುತ್ತಾರೆ. ದುರುಪಯೋಗವಾದ ಹಣ ರೂ.೮,೮೪,೧೩೮.೦೦ ವಾಗಿರುವುದು ತಿಳಿದ ತಕ್ಷಣ ಇವರುಗಳ ಮೇಲೆ ಸಿದ್ದಾಪುರ ಪೋಲೀಸ್ ಠಾಣೆಗೆ ದೂರು ನೀಡಲಾಯಿತು.